ಮಾತ್ರ ಯಾರು ಏನಂದರು ತಲೆಕೆಡಿಸಿಕೊಳ್ಳದೆ 'ಸೊ ವಾಟ್' ಎನ್ನುವಂತಿರುತ್ತಾಳೆ. ನೇರ ಮೂಗಿನ, ಉದ್ದ ರೇಷ್ಮೆ ಕೂದಲಿನ, ಎತ್ತರದ, ಅದಕ್ಕೆ ತಕ್ಕ ಮೈಕಟ್ಟಿನ, ಕೋಮಲ ತ್ವಚೆಯ, ಸೌಮ್ಯಮುಖದ ಆ ಸುಂದರಿ ತನ್ನ ನಾಲಿಗೆಯನ್ನು ಯಾವ ಕಲ್ಲಿನ ಮೇಲೆ ಮಸೆದು ಚೂಪುಗೊಳಿಸಿದ್ದಾಳೋ, ಅದು ಆ ಪರಮಾತ್ಮನಿಗೆ ಗೊತ್ತು! ಕೆಲಸಕ್ಕೆ ಸೇರಿ ನಾನು ಒಂದು ವಾರವನ್ನೂ ಪೂರೈಸಿರಲಿಲ್ಲ. ರಾಜು ಎನ್ನುವವನು ಇವಳಿಗೆ ಅದೇನು ಅನ್ನಬಾರದನ್ನು ಅಂದನೆಂದು ಕಾಣುತ್ತದೆ... "ಓಯ್... ನಿನ್ನ ನೀನು ಏನಂಥ ತಿಳ್ಕೊಂಡಿದ್ದೀಯಾ? ಒಂದು ರೇಪ್ ಮಾಡ್ತಿ, ಇಲ್ಲಾಂದ್ರೆ ಕೊಲೆ ಮಾಡ್ತೀ, ಅದನ್ನ ಮೀರಿದ್ರೆ ಎರಡ್ನು ಮಾಡ್ತಿ. ಅದ್ಬಿಟ್ಟು ನಿನ್‌ಕೈಲಿ ಇನ್ನೇನು ಮಾಡಕ್ಕಾಗಲ್ಲ ಹೋಗಲೇ" ಎಂದು ಮುಖಕ್ಕೆ ರಾಚುವಂತೆ ಕಿರುಚಿದ್ದು ಇಡೀ ಬ್ಯಾಚ್‌ಗೆ ಕೇಳಿಸಿತ್ತು. ಪಾಪ... ಹಾಗೆ ಅಂದವನ ಮುಖ ನೋಡಲು ಲಾಯಕ್ಕಿರಲಿಲ್ಲ ಬಿಡಿ, ಅದು ಬೇರೆ ವಿಷಯ. ಅವಳ ಮಾತು ಕೇಳಿದ ಮೇಲೆ 'ಓ ಇವ್ಳು ಗಂಡಸರ ಪಾಲಿನ ಹುಳಿದ್ರಾಕ್ಷಿ' ಎನಿಸಿತು ನನಗೆ. ನನ್ನ ಮುಂದಿನ ಮಷಿನ್‌ನಲ್ಲಿ ಕೆಲಸ ಮಾಡುತ್ತಿದ್ದ ಲಲಿತಾ ಇವಳನ್ನು 'ಸರಿಯಿಲ್ಲ' ಎಂದಳಂತೆ. ನಗುತ್ತಲೇ ಬಂದವಳು, "ಅಕ್ಕಾ ನಿನ್ನ ಮಗ್ನಿಗಿಂತ ಚಿಕ್ಕೋನ ಜತೆ ಸರಸ ಸಲ್ಲಾಪ ಆಡೋದು, ಆ ಹುಡ್ಗುಂಗೆ ಟ್ರೈನಿಂಗ್ ಕೊಡ್ತಿರೋದು ನಂಗೆ ಗೊತ್ತಿಲ್ಲಾಂತ ಅಂದ್ಕೊಂಡ್ಯಾ? ಸಾವಿತ್ರಿಯಂತಹ ಹೆಣ್ಣಿಗೆ ಮಾತ್ರಾ ಶೀಲದ ಬಗ್ಗೆ ಮಾತಾಡೋ ಹಕ್ಕಿರೋದು, ನಿನ್ನಂಥ ಸೊಕ್ಕಿಗೆ ಮೈಚಾಚೋ ಸೂಳೆಗಲ್ಲ!" ಎಂದು ತನ್ನ ಕಂಚಿನ ಕಂಠ ಮೊಳಗಿಸಿಯೇಬಿಟ್ಟಳು. ನಾನು ರೆಪ್ಪೆ ಸಹ ಮಿಟುಕಿಸದೆ ನೋಡಿದ್ದೆ. ನಾಲಿಗೆ ಕಡಿತ ತಾಳಲಾರದೆ ಅಂದ ಲಲಿತಾ, ತನ್ನ ಶೀಲಹರಣದ ಕಥೆ ಅವಳ ಬಾಯಿಲ್ಲಿ ಹರಾಜಾದ ಮೇಲೆ ಒಂದು ವಾರ ರಜೆಹಾಕಿ ಸುಧಾರಿಸಿಕೊಂಡಳು. ಲಲಿತಾ ನಲವತ್ತೈದು ದಾಟಿದ ಹೆಂಗಸು, ಆಕೆಗೆ ತನ್ನ ಮಗನಿಗಿಂತ ಕಿರಿಯ ವಯಸ್ಸಿನ ಹುಡುಗನ ಜೊತೆ ಸಂಬಂಧ ಇದೆ ಎಂದು ಜನ ರೆಸ್ಟ್‌ರೂಮ್‌ನಲ್ಲಿ ಮಾತಾಡಿಕೊಳ್ಳುವುದನ್ನು ನಾನು

